ಅ.ದಾ.ನಂ.120/2021
ಪಿ.ಡಬ್ಲ್ಯು-3

ದಿನಾಂಕ: 25.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿಸವಾಲು: ಶ್ರೀ.ಆರ್.ಬಿ.ವಾಯ್. ವಕೀಲರಿಂದ **6** ನೇ ಪ್ರತಿವಾದಿ ಪರವಾಗಿ.

ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು 1 ನೇ ವಾದಿ ನೀಡಿರುತ್ತಾರೆ. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯರು ಈಗ ಆಲಗೂರ ಆರ್.ಸಿ.ಯಲ್ಲಿ ವಾಸವಾಗಿದ್ದಾರೆ. ಮೃತ ದುಂಡಪ್ಪ ನನಗೆ ಸಹೋದರ ಮಾವ ಎಂದರೆ ಸರಿ. ಮೃತ ದುಂಡಪ್ಪನ ಹೆಸರಿಗೆ ದಾವಾ ಆಸ್ತಿ ಮುಳುಗಡೆಯಿಂದ ಬಂದಿರುತ್ತದೆ. ಯಾವ ವರ್ಷದಲ್ಲಿ ಅಂತ ಗೊತ್ತಿಲ್ಲ. 1 ನೇ ವಾದಿ ಮೃತ ದುಂಡಪ್ಪನ ಹೆಂಡತಿ ಅಂತ ತೋರಿಸುವ ದಾಖಲೆ ಇಲ್ಲ. 1 ನೇ ವಾದಿಯ ಹೆಸರಿನಲ್ಲಿರುವ ಆಸ್ತಿಗಳ ದಾಖಲೆ ಇಲ್ಲ. 1 ನೇ ವಾದಿ ಮೃತ ದುಂಡಪ್ಪನ ಹೆಂಡತಿ ಮತ್ತು 2 ನೇ ವಾದಿ ಆತನ ಮಗಳು ಅಂತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ಮೃತ ದುಂಡಪ್ಪನ ಕಾನೂನುಬದ್ಧ ಹೆಂಡತಿ ಎಂದರೆ ಸರಿಯಲ್ಲ. 1 & 2 ನೇ ವಾದಿಯಲ್ಲಿ ತೊರವಿ ಗ್ರಾಮದಲ್ಲಿದ್ದಾರೆಂದರೆ ಸರಿಯಲ್ಲ. ಆಲಗೂರ ಆರ್.ಸಿ. ಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**1** ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ: ಇಲ್ಲ.

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]
ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು,
ಜಮಖಂಡಿ.